ದಿನಾಂಕ 28.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- 10ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಕೆ.ಪಿ ರವರಿಂದಃ-</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನನ್ನ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಮುಕ್ಕಟೀರ ಕುಟುಂಬದಲ್ಲಿ 6 ಭಾಗಗಳಿವೆ. ನಾನು 3ನೇ ಭಾಗಕ್ಕೆ ಸೇರಿದವನು. ಮೇದಪ್ಪರವರು 5ನೇ ಭಾಗಕ್ಕೆ ಸೇರಿದವರು. 5ನೇ ಪ್ರತಿವಾದಿಯ ತಂದೆಯ ಹೆಸರು ಸುಬ್ಬಯ್ಯ. ಸುಬ್ಬಯ್ಯರವರಿಗೆ ಒಟ್ಟು ನಾಲ್ಕು ಜನ ಮಕ್ಕಳು, ಅವರ ಪೈಕಿ ಇಬ್ಬರು ಹೆಣ್ಣು ಹಾಗೂ ಮೇದಪ್ಪ ಮತ್ತು ಕರುಂಬಯ್ಯ ಎಂಬ ಇಬ್ಬರು ಗಂಡು ಮಕ್ಕಳು. ಸುಬ್ಬಯ್ಯನ ಹೆಣ್ಣು ಮಕ್ಕಳು ಎಲ್ಲಿ ವಾಸವಾಗಿದ್ದಾರೆ ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ. ಕರುಂಬಯ್ಯರವರಿಗೆ ಅಯ್ಯಣ್ಣ ಮತ್ತು ಮೋಹನ್ ಎಂಬ ಗಂಡು ಮಕ್ಕಳು ಇದ್ದು, ಇಬ್ಬರು ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಕರುಂಬಯ್ಯರವರಿಗೆ ಎಷ್ಟು ಆಸ್ತಿ ಇದೆ ಹಾಗೂ ಯಾವ ಸರ್ವೆ ನಂಬರ ಗಳಲ್ಲಿ ಆಸ್ತಿ ಇದೆ ಎಂಬುದು ನನಗೆ ಗೊತ್ತಿಲ್ಲ.

ವಾದಿ ಯಾವ ಸರ್ವೆ ನಂಬರ ಗಳಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ವಾದಿಯ ಸ್ವತ್ತಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾಲ್ಕೇರಿ ಬಣ್ಣಮೊಟ್ಟೆ ಗ್ರಾಮದಲ್ಲಿ ಮುಕ್ಕಟೀರ ಕುಟುಂಬಕ್ಕೆ ಸೇರಿದ

ಆಸ್ತಿಗಳು ಇವೆ ಎಂದರೆ ಸರಿ. ಸದರಿ ಆಸ್ತಿಗಳಿಗೆ ಮುಕ್ಕಟೀರ ಚಿನ್ನಪ್ಪ, ಕಾರ್ಯಪ್ಪ, ಮಾದಪ್ಪ ಹಾಗೂ ಮುದ್ದಪ್ಪ ರವರು ಹಕ್ಕುದಾರರು ಎಂದರೆ ಸರಿ. ಕಾರ್ಯಪ್ಪ ರವರಿಗೆ ಕಾವೇರಮ್ಮ ಎಂಬ ಮಗಳು ಇದ್ದಾರೆ ಎಂದರೆ ಸರಿ. ಕರುಂಬಯ್ಯರವರು ನಾಲ್ಕೇರಿ ಗ್ರಾಮದ ಸರ್ವೆ ನಂ. 48/9 ರ ಸ್ವತ್ತನ್ನು ಮುಕ್ಕಟೀರ ಸೋಮ್ಮಯ್ಯ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಪ್ರಸ್ತುತ ಅಶೋಕ್ ರವರು ಸ್ವಾ ಧೀನದಲ್ಲಿ ಇದ್ದಾರೆ. ಮುಕ್ಕಟೀರ ಚಿನ್ನಪ್ಪ, ಕಾರ್ಯಪ್ಪ, ಮಾದಪ್ಪ, ಮುದ್ದಪ್ಪ, ಕರುಂಬಯ್ಯ ಮತ್ತು ಮೇದಪ್ಪ ರವರು ಒಂದೇ ಭಾಗದವರು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಮುಕ್ಕಟೀರ ಕುಟುಂಬದ ವಂಶವೃಕ್ಷ ದ ಬಗ್ಗೆ ಹಾಗೂ ಕುಟುಂಬದ ಆಸ್ತಿಗಳ ಬಗ್ಗೆ ಸರಿಯಾದ ವಿವರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ಇತರೆ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.